

‘ಸಿನಿಮಾರಂಗಕ್ಕೆ ಬರಬೇಕೆಂಬ ಕನಸಿಟ್ಟುಕೊಂಡು ಇಲ್ಲಿಗೆ ಬಂದವಳಲ್ಲ ನಾನು. ಅಚಾನಕ್ಕಾಗಿ ಸಿಕ್ಕಿದ ಅವಕಾಶ ಒಳ್ಳೆಯ ಫಲ ಕೊಟ್ಟಿದೆ. ಇದು ದೇವರ ದಯೆ ಎಂದೇ ನಂಬುತ್ತೇನೆ. ಸಿನಿಮಾರಂಗದ ಬಗ್ಗೆ ನಾನು ಕನಸುಗಳನ್ನು ಇಟ್ಟುಕೊಳ್ಳುವುದಕ್ಕಿಂತ ನಾನೂ ಇಲ್ಲಿ ಒಬ್ಬಳಾಗಿ ಸೇವೆ ಸಲ್ಲಿಸಬೇಕೆಂಬ ಹಂಬಲ ಹೆಚ್ಚಿದೆ. ಅಭಿನಯದ ಮೂಲಕವೇ ನನಗೆ ಸಿಕ್ಕ ಅವಕಾಶಗಳಿಗೆ ಥ್ಯಾಂಕ್ಸ್ ಹೇಳಬೇಕು ಎನಿಸಿದೆ. ಒಳ್ಳೆಯ ಅವಕಾಶಗಳು ಬಂದರೆ ಅವನ್ನು ಅಪ್ಪಿಕೊಂಡು ಸೇವೆ ಮಾಡುತ್ತೇನೆ. ಪ್ರೇಕ್ಷಕರಿಗೆ ನನ್ನ ಕಲಾಸೇವೆ ನೀಡಬೇಕು ಎನ್ನುವುದೇ ದೊಡ್ಡ ಕನಸು’ ಎನ್ನುತ್ತಾರೆ ಅವರು.

ಧಾರಾವಾಹಿಯ ‘ಮೀರಾ’ ಈಗಲೂ ತಮ್ಮೊಳಗಿದ್ದು, ಆಗಾಗ ಸಲಹೆಗಳನ್ನು ನೀಡುತ್ತಿರುತ್ತಾಳೆ ಎನ್ನುತ್ತಲೇ ಕಿರುತೆರೆಯ ದಿನಗಳನ್ನು ಮೆಲುಕು ಹಾಕುತ್ತಾರೆ.

‘ಧಾರಾವಾಹಿ ಶಿಸ್ತು ಹೇಳಿಕೊಟ್ಟಿತು. ಸ್ಪಾಟ್‌ನಲ್ಲೇ ಡೈಲಾಗ್ ಕಲಿಯಬೇಕು. ಅಲ್ಲೇ ಕಾಸ್ಟ್ಯೂಮ್ ಬದಲಾಯಿಸಬೇಕು, ಹಿಂದಿನ ಸೀನ್‌ಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹೆಚ್ಚು ಟೇಕ್‌ಗಳನ್ನು ತೆಗೆದುಕೊಳ್ಳದೆ ಕೊಟ್ಟಿರುವ ಸಮಯದಲ್ಲಿ ದೃಶ್ಯವನ್ನು ಮುಗಿಸಬೇಕು. ಧಾರಾವಾಹಿ ಮಾಡುತ್ತಾ ಪಳಗುವ ಪ್ರಕ್ರಿಯೆಯೇ ತುಂಬಾ ಚೆನ್ನಾಗಿರುತ್ತದೆ. ಧಾರಾವಾಹಿಯಲ್ಲಿ ಕೆಲಸ ಮಾಡಿ ಬಂದವರಿಗೆ ಸಿನಿಮಾರಂಗ ಕಷ್ಟ ಎನ್ನಿಸುವುದಿಲ್ಲ. ಆದರೆ ಅಭಿನಯದಲ್ಲಿ ವ್ಯತ್ಯಾಸವಿರುತ್ತದೆ. ಕೊನೆಗೆ, ಕೆಲಸ ಎಂದು ಬಂದಾಗ ಎಲ್ಲಾ ಒಂದೇ’ ಎಂದು ಹೇಳುತ್ತಾರೆ.

ಸಿನಿಮಾರಂಗ ಎಂಬ ಸ್ಪರ್ಧಾತ್ಮಕ ಜಗತ್ತಿನಲ್ಲಿ ‘ಐಡೆಂಟಿಟಿ’ಯ ಸವಾಲಿನ ಬಗ್ಗೆ ಮಾತನಾಡುತ್ತಾ, ‘ಸ್ಪರ್ಧಾತ್ಮಕ ಜಗತ್ತು ಎಂಬ ಆಲೋಚನೆಯಲ್ಲಿ ನಾನಿಲ್ಲ. ನನ್ನನ್ನೇ ನಾನು ಸ್ಪರ್ಧೆಗೆ ಇಟ್ಟು ನೋಡುತ್ತೇನೆ. ಈ ವರ್ಷಕ್ಕಿಂತ ಮುಂದಿನ ವರ್ಷ ಚೆನ್ನಾಗಿ ಕೆಲಸ ಮಾಡಬೇಕು ಎಂಬುದಷ್ಟೆ. ನಮ್ಮನ್ನು ನಾವು ಸಂಪೂರ್ಣವಾಗಿ ಕಲಾಸೇವೆಗೆ ಒಪ್ಪಿಸಿದರೆ ಇವೆಲ್ಲ ಯಾವುದೂ ತಲೆಗೆ ಬರುವುದಿಲ್ಲ. ನನ್ನ ಕೆಲಸ, ನನ್ನ ಜಗತ್ತು, ನನ್ನ ಜೀವನ– ಇದನ್ನು ಹೇಗೆ ಉತ್ತಮ ಮಾಡಿಕೊಳ್ಳಬೇಕು ಎಂಬುದಷ್ಟೇ ನನ್ನ ಯೋಚನೆ. ನನ್ನ ಕಣ್ಮಣಿ (ಅಭಿಮಾನಿ)ಗಳಿಗೆ ಎಂದಿಗೂ ಕೃತಜ್ಞಳಾಗಿರುತ್ತೇನೆ’ ಎನ್ನುತ್ತಾರೆ.

ಸದ್ಯ ‘ಚೈಲ್ಡ್ ಸೈಕಾಲಜಿ’ ವ್ಯಾಸಂಗ ಮಾಡುತ್ತಿರುವ ಅಂಕಿತಾ, ಸಿನಿಮಾರಂಗದಲ್ಲೂ ಬ್ಯುಸಿಯಾಗಿದ್ದಾರೆ. ‘ಜಸ್ಟ್ ಮ್ಯಾರೀಡ್’ ಸಿನಿಮಾದಲ್ಲಿ ನಟ ಶೈನ್ ಶೆಟ್ಟಿ ಜೊತೆ ನಟಿಸುತ್ತಿದ್ದಾರೆ. ನಿರೂಪ್ ಭಂಡಾರಿ ಅವರು ಮುಖ್ಯ ಪಾತ್ರದಲ್ಲಿರುವ ‘ಸತ್ಯ ಸನ್ ಆಫ್ ಹರಿಶ್ಚಂದ್ರ’ ಸಿನಿಮಾದಲ್ಲಿ ನಟಿಸಿದ್ದು, ಎರಡೂ ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗುತ್ತಿವೆ.




# ಅರ್ಜುನ್ ‘ಅನಿಮೇಷನ್’ ಕಥೆ

ಕನ್ನಡ ಸಿನಿಮಾರಂಗದಲ್ಲಿ ‘ಮ್ಯಾಜಿಕಲ್ ಕಂಪೋಸರ್’ ಎಂದೇ ಹೆಸರು ಗಳಿಸಿರುವ ಅರ್ಜುನ್ ಜನ್ಯ, ‘45’ ಸಿನಿಮಾ ಮೂಲಕ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ಶಿವರಾಜ್ ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ಮೂವರನ್ನು ಒಳಗೊಂಡ ಈ ಸಿನಿಮಾ ಬಗ್ಗೆ ಬಹುನಿರೀಕ್ಷೆಗಳೂ ಹುಟ್ಟಿಕೊಂಡಿವೆ.

ಈಚೆಗೆ ಚಿತ್ರೀಕರಣವೂ ಪೂರ್ಣಗೊಂಡಿದ್ದು, ಈ ಸಿನಿಮಾ ಕುರಿತು ಅರ್ಜುನ್ ಜನ್ಯ, ಕೆಲವು ಸಂಗತಿಗಳನ್ನು ಹಂಚಿಕೊಂಡಿದ್ದಾರೆ. ಕೋವಿಡ್ ಸಮಯದಲ್ಲಿ ತೀರಿಕೊಂಡ ತಮ್ಮ ಸಹೋದರ ಕಿರಣ್ ಈ ಸಿನಿಮಾ ಮಾಡಲು ಸ್ಫೂರ್ತಿ ಎಂದು ಹೇಳಿದ್ದಾರೆ.

‘ಸಿನಿಮಾ ಮಾಡುವ ಮೊದಲು ಸಿನಿಮಾದ ಸಂಪೂರ್ಣ ಆನಿಮೇಟೆಡ್ ಆಯಾಮವನ್ನು ತಯಾರಿಸಿದ್ದೆ. ಕನ್ನಡ ಸಿನಿಮಾರಂಗದಲ್ಲಿ ಇದೇ ಮೊದಲು ಇಡೀ ಸಿನಿಮಾವನ್ನು ಅನಿಮೇಷನ್ ಮೂಲಕ ಪ್ರಿ– ವಿಷುವಲೈಸ್ ಮಾಡಲಾಯಿತು. ಅನಿಮೇಷನ್ ತಯಾರು ಮಾಡುವುದೇ ಒಂದೂವರೆ ವರ್ಷವಾಯಿತು. ಸಿನಿಮಾ ಚಿತ್ರೀಕರಣ ಪೂರ್ಣಗೊಳ್ಳಲು 106 ದಿನಗಳು ಮಾತ್ರ ಹಿಡಿದವು. ಈ ರೀತಿಯ ಕ್ರಿಯಾತ್ಮಕ ಅಪ್ರೋಚ್ ಪ್ರೊಡಕ್ಷನ್ ವೆಚ್ಚವನ್ನು ತಗ್ಗಿಸುತ್ತದೆ ಹಾಗೂ ಸಿನಿಮಾ ಪ್ರಕ್ರಿಯೆಯನ್ನು ಸರಳಗೊಳಿಸುತ್ತದೆ’ ಎನ್ನುವುದು ಅರ್ಜುನ್ ಅನುಭವದ ಮಾತು.

‘ಅನಿಮೇಷನ್ ತಂತ್ರಜ್ಞಾನದಲ್ಲಿ ಸಿನಿಮಾದ ಲೋಪದೋಷಗಳು ಗೋಚರಿಸುತ್ತವೆ, ತಿದ್ದುಪಡಿಗೆ ಅವಕಾಶವಾಗುತ್ತದೆ. ಅನಿಮೇಷನ್ ರೂಪಿಸುವುದು ಕಷ್ಟಕರವಾಗಿತ್ತು, ಸಿನಿಮಾ ಮಾಡುವುದೇ ಒಂದರ್ಥದಲ್ಲಿ ಸುಲಭವಾಯಿತು. ಈ ಸಿನಿಮಾ ಎರಡು ರೀತಿಯ ಪ್ರಾಜೆಕ್ಟ್ ಆಯಿತು. ನಿಜವಾದ ಸಿನಿಮಾ ನಂತರ ಈ ಅನಿಮೇಷನ್ ಸಿನಿಮಾ ಬಿಡುಗಡೆಗೊಳಿಸಲಾಗುವುದು. ಇದು ಇತರೆ ನಿರ್ದೇಶಕರಿಗೂ ಸಹಾಯಕ್ಕೆ ಬರುವುದು’ ಎಂದು ತಿಳಿಸಿದ್ದಾರೆ.

# ರಾದ್ಯಾ ಲಯ...

ಕಿರಣ್ ರಾಜ್ ನಟನೆಯ ‘ರಾನಿ’ ಸಿನಿಮಾದಲ್ಲಿ ಅಭಿನಯಿಸಿರುವ ನಟಿ ರಾದ್ಯಾ, ಈ ಸಿನಿಮಾದಲ್ಲಿ ತಮ್ಮ ಪಾತ್ರಕ್ಕೆ ಬರುತ್ತಿರುವ ಪ್ರತಿಕ್ರಿಯೆ ಕಂಡು ಅಚ್ಚರಿಯಾಗಿರುವುದಾಗಿ ಹೇಳಿಕೊಂಡಿದ್ದಾರೆ.

‘ಸಿನಿಮಾ ಕುರಿತು ಮೊದಮೊದಲು ತುಂಬಾ ನರ್ವಸ್ ಆಗಿದ್ದೆ. ನನ್ನ ಪಾತ್ರ ಪಾಸಿಟಿವ್ ಹಾಗೂ ನೆಗೆಟಿವ್ ಎರಡೂ ಶೇಡ್‌ಗಳನ್ನು ಹೊಂದಿದ್ದ ಕಾರಣ ಇದನ್ನು ಜನ ಹೇಗೆ ಸ್ವೀಕರಿಸುತ್ತಾರೆ ಎಂಬ ತಲ್ಲಣ ಇತ್ತು. ಅಚ್ಚರಿ ಎಂದರೆ, ಜನರಿಗೆ ಈ ಪಾತ್ರ ಇಷ್ಟವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ನನಗೆ ಬರುತ್ತಿರುವ ಪ್ರತಿಕ್ರಿಯೆಗಳನ್ನು ನೋಡಿದರೆ ತುಂಬಾ ಖುಷಿಯಾಗುತ್ತದೆ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಕನ್ನಡದಲ್ಲಿ ಸದ್ಯ ಮೂರು ಸಿನಿಮಾಗಳಲ್ಲಿ ನಟಿಸಿದ್ದಾರೆ ರಾದ್ಯಾ. ಇಲ್ಲೇ ತಮ್ಮ ನೆಲೆ ಕಂಡುಕೊಳ್ಳಲು, ಭವಿಷ್ಯ ಕಟ್ಟಿಕೊಳ್ಳಲು ಉತ್ಸುಕರಾಗಿರುವ ಅವರ ಪರಿಶ್ರಮವನ್ನು ಗುರುತಿಸಿದ ಸಿನಿಮಾರಂಗಕ್ಕೆ ಧನ್ಯವಾದವನ್ನೂ ಹೇಳಿದ್ದಾರೆ.

‘ನನಗೆ ಹೊಸ ಪ್ರೊಡಕ್ಷನ್ ಹೌಸ್‌ಗಳೊಂದಿಗೆ ಕೆಲಸ ಮಾಡುವ ಆಸೆಯಿದೆ. ದೊಡ್ಡ ಬ್ರೇಕ್‌ಗಾಗಿ ಎದುರು ನೋಡುತ್ತಿದ್ದೇನೆ. ತುಂಬಾ ಅವಸರದಲ್ಲಿ ಸಿನಿಮಾ ಮಾಡಬಾರದು ಎಂದು ನನ್ನದೇ ಲಯದಲ್ಲಿ ಹೋಗುತ್ತಿದ್ದೇನೆ’ ಎಂದು ತಮ್ಮ ನಿರೀಕ್ಷೆಯನ್ನು ವ್ಯಕ್ತಪಡಿಸಿದ್ದಾರೆ.

